


ಎಡದಿಂದ ಬಲಕ್ಕೆ :

1. ಕಾಲ ಭೈರವನ ಆರಾಧನೆಗೇ ಅರ್ಪಿತವಾದ ಶರೀರ (4)
3. ಸಾಕಾಗಲಿಲ್ಲವೇ ಈ ಸರ್ವಸ್ವವೂ ? (3)
4. ಮೊಸರಿನಿಂದ ತಯಾರಿಸುವ ತಿನಿಸುಗಳ ಸಂಖ್ಯೆ ಅನಂತವೇನಲ್ಲ (3)
6. ಪಶ್ಚಿಮದ ತುದಿಯಿಂದ ಸರಿದು ಬಂದದ್ದು ಈ ನೂರು ಪಾದಗಳ ಪ್ರಾಣಿ (4)
7. ಹೊಸ ಕಾಳುಕಡ್ಡಿ ಹೊಂದಿಸಿ ಎಲ್ಲರಿಗೂ ರವಾನಿಸು (4)
8. ತಕ್ಕವರನ್ನು ಕರೆತರಲು ಹೊರಟರೇ ಅಡ್ಡಿ, ಆಕ್ಷೇಪ (4)
10. ಮಡಿಸಿಟ್ಟ ರೀತಿ ಸರಿ ಇಲ್ಲವೆಂದು ಇಂಥ ಭಾರೀ ಕೋಪ (4)
12. ಕೂರ್ಮಾವತಾರವನ್ನು ನೈಜವೆನ್ನುವಂತೆ ತೋರಿದ್ದು ಅದ್ಭುತ ಕೈಚಳಕ (4)
14. ಕಾಡಿನಲ್ಲೇ ಹುಟ್ಟಿದವರಿಗಾಗಿ ನಡೆದಿದೆ ತೀವ್ರ ಶೋಧ (4)
16. ಆ ಗುಡ್ಡದ ಮೇಲೂ ಕಾಣುತ್ತಿದೆ ನೋಡಿ, ಒಂದು ಜೋಪಡಿ (3)
17. ಪಾಲಿಗೆ ಬಂದದ್ದನ್ನೆಲ್ಲ ಕಾಪಾಡಿದ ಬಗೆ ಹೀಗೆ (3)
18. ಹಾಡಲೆಂದು ಸಾಲು ನಿಂತವರಿಗೆಲ್ಲಕುಡಿಯಲು ಕುದಿಕುದಿವ ಕ್ಷೀರ (4)

ಮೇಲಿಂದ ಕೆಳಕ್ಕೆ :

1. ಈ ಕಲುಷಿತ ನೀರು ತುಂಬಿಡಲು ಬಿಂದಿಗೆ ಬೇರೆ ಬೇಕೇ ? (3)
2. ಈ ಎಲ್ಲ ದಿರಸುಗಳಿಗೆ ಹಣ ಕೊಟ್ಟ ದಾಖಲೆ ಎಲ್ಲಿ ? (3)
3. ಸಹನೆ ಮೀರುವಂತಹ ಸಮಯ ಇನ್ನೇನು ಹತ್ತಿರದಲ್ಲೇ ಇದೆ (4)
5. ತೋಟದ ಕೆಲಸಕ್ಕೆ ತಕ್ಕಂತೆಯೇ ಇದೆ ವಿಶಾಲ ಕೆರೆ (3)
7. ಆತ ಕೋವಿ ತಿರುಗಿಸಿ ನಿಂತಿದ್ದನ್ನು ಕಂಡು ಭಾರೀ ತಳಮಳ (4)
9. ಶುರುವಾಯಿತು ಅನ್ಯಾಯದ ವಸೂಲಿ ಲಂಚ (4)
11. ಗುಮಾನಿ ಬರಲು ಕಾರಣವಾದದ್ದು ಆ ವಸ್ತುವಿನ ಹೊಳಪು (3)
13. ಆದ್ಯಂತರಹಿತನನ್ನು ಕುಳ್ಳಿರಿಸಿ ಭಕ್ತಿಯಿಂದ ಮಾಡಿದ ಪೂಜೆ (4)
14. ಎಲ್ಲರನ್ನೂ ಸಾಕಲು ಸಾಕಾಗುವಂತಿದೆ ಹೊಲದ ಬೆಳೆಗಳ ಸಮೃದ್ಧಿ (3)
15. ನಗೆಪಾಟಲಾದೀತು ತಿಳಿದಿಲ್ಲವೆಂದರೆ ಅಂಚೆ ! (3)

## 28-09-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಆಧಿಪತ್ಯ ; 3. ಮಾರಣ ; 4. ಜಿಗಿತ ; 6. ಅನನ್ಯತೆ ; 8. ಮರಕತ ; 10. ನವನೌಕೆ ; 12. ಯಕ್ಷಪತಿ ; 16. ರಜನಿ ; 17. ಕವಿತೆ ; 18. ಸುಧಾಕರ

ಮೇಲಿಂದ ಕೆಳಕ್ಕೆ :

1. ಆಣತಿ ; 2. ತ್ಯಜಿಸು ; 3. ಮಾಲಿನ್ಯ ; 5. ತತ್ವಾರ ; 6. ಅಭಿಮಾನ ; 7. ತೆಗಳಿಕೆ ; 8. ಮಹನೀಯ ; 9. ತರಗತಿ ; 11. ನೌಕರ ; 13. ಕ್ಷಮತೆ ; 14. ಮುನಿಸು ; 15. ಮಕರ

# ಕೋಗಿಲೆಯ ಜನನ; ಏನು ವಿಸ್ಮಯ?

ಕೋಗಿಲೆಗಳದು ಒಂದು ವಿಶಿಷ್ಟ ಕುಟುಂಬ. 'ಕಕೂಲಿಡೇ' ಎಂಬ ಈ ಕುಟುಂಬದಲ್ಲಿ 127 ಪ್ರಭೇದಗಳಿವೆ. ಧರೆಯ ಉಷ್ಣ ವಲಯದಲ್ಲಿ ಈ ಹಕ್ಕಿಗಳು ನೆಲೆಸಿವೆ. ವಿಸ್ಮಯ ಏನೆಂದರೆ, ಈ ಪೈಕಿ ಭಾರತದಲ್ಲಿರುವ ಮೂರು ಪ್ರಭೇದಗಳೂ ಸೇರಿ ಒಟ್ಟು 59 ಪ್ರಭೇದಗಳ ಈ ಹಕ್ಕಿಗಳು ಇತರ ಹಕ್ಕಿಗಳ ಗೂಡಿನಲ್ಲಿ ಹುಟ್ಟುತ್ತವೆ ; ತಮ್ಮದಲ್ಲದ ತಂದೆ ತಾಯಿಯರ ಪೋಷಣೆಯಲ್ಲಿ, ರಕ್ಷಣೆಯಲ್ಲಿ ಬೆಳೆಯುತ್ತವೆ ! ಹಾಗಾಗಿ 'ಪರಪುಟ್ಟ' ಎಂಬ ಅಭಿಧಾನವನ್ನೂ ಪಡೆದಿವೆ. ಹೆಣ್ಣು ಕೋಗಿಲೆಗಳು ತಾವು ಮೊಟ್ಟೆ ಇಡುವ ಪೂರ್ವದ ಮತ್ತು ನಂತರದ ಎಲ್ಲ ಹೊಣೆಗಾರಿಕೆಗಳನ್ನು, ಎಂದರೆ ಗೂಡು ನಿರ್ಮಿಸುವ, ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುವ, ಆಹಾರ ಒದಗಿಸಿ ರಕ್ಷಿಸಿ ಬೆಳೆಸುವ ಶ್ರಮದಾಯಕ ಕೆಲಸಗಳನ್ನು, ಇತರ ನಿರ್ದಿಷ್ಟ ಹಕ್ಕಿಗಳಿಗೆ ಅವಕ್ಕೆ ತಿಳಿಯದಂತೆ ವಹಿಸಿಬಿಡುತ್ತವೆ. ಕರ್ಣಾನಂದಕರ ಗಾಯನಕ್ಕೆ ಹೆಸರಾದ ಕೋಗಿಲೆಗಳ ಈ ಸಂತಾನ ವರ್ಧನಾಕ್ರಮ ಊಹಿಸಲೂ ಆಗದಂತಹ ವಂಚನೆಯ, ಕುತಂತ್ರದ, ಪರಮ ವಿಸ್ಮಯದ್ದೂ ಆದ ಒಂದು ವಿದ್ಯಮಾನ. ಏಕೆಂದು ನೀವೇ ನೋಡಿ :




ಈ ಬಗೆಯ ಪ್ರತಿ ಕೋಗಿಲೆ ಪ್ರಭೇದವೂ ತಾನು ಮೊಟ್ಟೆ ಇಡುವ ಸಮಯದಲ್ಲಿ ತನ್ನದೇ ಮೊಟ್ಟೆಯ ಗಾತ್ರ, ಆಕಾರ ಮತ್ತು ಚಿತ್ತಾರಗಳನ್ನು ಹೋಲುವಂತಹ ಮೊಟ್ಟೆಗಳನ್ನಿಡುವ ನಿರ್ದಿಷ್ಟ ಇತರ ಹಕ್ಕಿ ಪ್ರಭೇದಗಳ ಗೂಡೊಂದನ್ನು ಹುಡುಕಿಕೊಳ್ಳುತ್ತದೆ. ಆ ಗೂಡಿನ ಒಡೆಯರು ಗೂಡಿನಿಂದ ದೂರ ಹೋಗಿರುವ ಸಮಯಕ್ಕೇ ಕಾದು, ಆ ಗೂಡಿನಲ್ಲಿಳಿದು ಕ್ಷಿಪ್ರವಾಗಿ ತನ್ನದೊಂದು ಮೊಟ್ಟೆಯನ್ನಿಡುತ್ತದೆ. ಜೊತೆಗೆ ಈಗಾಗಲೇ ಗೂಡಿನಲ್ಲಿದ್ದ ಅತಿಥೇಯ ಹಕ್ಕಿಗಳ ಒಂದು ಮೊಟ್ಟೆಯನ್ನು ಹೊರಹಾಕುತ್ತದೆ ( ಚಿತ್ರ 3ಎ). ಮೊಟ್ಟೆಗಳ ಒಟ್ಟು ಸಂಖ್ಯೆ ಬದಲಾಗದಿರುವುದರಿಂದ ಸ್ವಲ್ಪವೂ ಸಂಶಯ ಬಾರದೆ ಅತಿಥೇಯ ಹಕ್ಕಿಗಳು ತಮ್ಮ ಮೊಟ್ಟೆಗಳ ಜೊತೆಗೇ ಕೋಗಿಲೆಯ ಮೊಟ್ಟೆಗೂ ಕಾವು ಕೊಡುತ್ತವೆ. ಗೂಡಿನಲ್ಲಿ ಕೋಗಿಲೆ ಮರಿಯೇ ಮೊದಲು ಹೊರ ಬರುತ್ತದೆ.

ಹಾಗೆ ಜನ್ಮ ತಳೆವ ಕೋಗಿಲೆ ಮರಿ ಕಣ್ಣು ತೆರೆವ ಮೊದಲೇ ಕ್ರೌರ್ಯ ತುಂಬಿದ, ಮಹಾ ಸ್ವಾರ್ಥದ ಅಕೃತ್ಯವೊಂದನ್ನು ಕೈಗೊಳ್ಳುತ್ತದೆ. ತನ್ನ ಸಾಕು ತಾಯ್ತಂದೆಗಳು ಗೂಡಲ್ಲಿ ಇಲ್ಲದಾಗ ಇತರ ಮೊಟ್ಟೆಗಳನ್ನು ಒಂದೊಂದನ್ನಾಗಿ ಹೊರಕ್ಕೆ ತಳ್ಳುತ್ತದೆ (ಚಿತ್ರ 3 ಬಿ ) ; ಕಡೆಗೆ ತಾನೊಂದೇ ಉಳಿಯುತ್ತದೆ ! ಇದಾವುದನ್ನೂ ಗಮನಿಸದ ತಾಯ್ತಂದೆಯರು ತಮ್ಮ ಸ್ವಂತ ಮರಿಗಳ ಈ 'ಕೊಲೆಗಾರ'ನನ್ನು ತಮ್ಮದೇ ಮರಿ ಎಂದು ನಂಬಿ ಸಾಕುತ್ತವೆ. ವಿಸ್ಮಯ ಏನೆಂದರೆ, ಕೋಗಿಲೆಯ ಮರಿ ತನ್ನ ಪೋಷಕರಿಗಿಂತಲೂ ಭಾರೀ ಗಾತ್ರಕ್ಕೆ ಬೆಳೆಯುತ್ತದೆ ( ಚಿತ್ರ 1,2 ಮತ್ತು 3ಸಿ ). ಹಾಗಿದ್ದೂ, ತಮ್ಮ ಸಂತಾನವನ್ನು ನಾಶ ಮಾಡಿದ ಆ ರಾಕ್ಷಸನನ್ನು ಈ ಸಾಕು ತಂದೆತಾಯಿಯರು ಕಿಂಚಿತ್ತೂ ಸಂಶಯಪಡದೆ ಕುರುಡು ವ್ಯಾಮೋಹದೊಡನೆ ಭಾರೀ ಶ್ರಮವಹಿಸಿ ಸಾಕುತ್ತವೆ,

ಕಾಪಾಡುತ್ತವೆ. ಹಾಗೆ ಪ್ರೌಢವಾದೊಡನೆ ಕೋಗಿಲೆ ಮರಿ ಸ್ವತಂತ್ರವಾಗುತ್ತದೆ ! ಎಂಥ ವಿಸ್ಮಯ !

■ ಎನ್. ವಾಸುದೇವ್